ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-03-1996.

# *ಕರನ್ ಹಾರ್ (ಕರ್ತಾ) ಹಾಗೂ ಕರಾವನ್ ಹಾರ್ (ಕರ್ತವ್ಯ ಮಾಡಿಸುವವರ) ಸ್ಮೃತಿಯಿಂದ ಕರ್ಮಾತೀತ ಸ್ಥಿತಿ.*

('करनहार' और 'करावनहार' की स्मृति से कर्मातीत स्थिति का अनुभव)

ಇಂದು ಕಲ್ಯಾಣಕಾರೀ ತಂದೆಯು ತನ್ನ ಸಾಥಿಯಾಗಿರುವ ಕಲ್ಯಾಣಕಾರೀ ಮಕ್ಕಳನ್ನು ನೋಡುತ್ತಾ ಇದ್ದಾರೆ. ಎಲ್ಲಾ ಮಕ್ಕಳೂ ತುಂಬಾ ಸಂಲಗ್ನತೆಯಿಂದ, ಪ್ರೀತಿಯಿಂದ, ವಿಶ್ವ ಕಲ್ಯಾಣದ ಕಾರ್ಯ ಮಾಡುವುದರಲ್ಲಿ ತತ್ಪರರಾಗಿದ್ದಾರೆ. ಇಂತಹ ಸಾಥಿಗಳನ್ನು ನೋಡಿ ಬಾಪ್‌ದಾದಾರು ವಾಹ್ ಸಾಥೀ ಮಕ್ಕಳೇ, ವಾಹ್ ಎನ್ನುವ ಗೀತೆಯನ್ನು ಹಾಡುತ್ತಾ ಇರುತ್ತಿದ್ದಾರೆ. ಈ ದಿನ ಬಾಪ್‌ದಾದಾರವರು ನಾಲ್ಕೂ ಕಡೆಯ ಸೇವೆಯ ವೇಗವನ್ನು ನೋಡಿದರು. ಜೊತೆಯಲ್ಲಿ ಸ್ವಪುರುಷಾರ್ಥದ ಗತಿಯನ್ನೂ ನೋಡಿದರು. ಹೀಗೆ ಸೇವೆ ಹಾಗೂ ಸ್ವಪುರುಷಾರ್ಥದ ಗತಿ ಇವೆರಡರಲ್ಲಿ ಏನು ನೋಡಿರಬಹುದು? ನೀವು ತಿಳಿದುಕೊಂಡಿದ್ದೀರಾ? ಸೇವೆಯ ಗತಿಯು ತೀವ್ರವಾಗಿದೆಯೋ ಅಥವಾ ಸ್ವಪುರುಷಾರ್ಥದ ಗತಿಯು ತೀವ್ರವಾಗಿದೆಯೋ? ಏನು ಪರಿಸ್ಥಿತಿಯಿದೆ? ಎರಡರ ಸಮತೋಲನವಿದೆಯೇ? ಇಲ್ಲವೇ? ಹಾಗಾದರೆ ವಿಶ್ವಪರಿವರ್ತನೆ ಮಾಡುವ ಆತ್ಮರಿಗೆ ಅಥವಾ ಪ್ರಕೃತಿಗೆ ಆಶೀರ್ವಾದವು ಯಾವಾಗ ದೊರೆಯುವುದು? ಏಕೆಂದರೆ ಸಮತೋಲನೆಯಿಂದ ನಿಮಗೆ ಏನು ಆಶೀರ್ವಾದವು ದೊರೆತಿದೆಯೋ ಅದು ಅನ್ಯರಿಗೆ ದೊರೆಯುವುದು. ಆದರೆ ಸ್ವಪುರುಷಾರ್ಥ ಹಾಗೂ ಸೇವೆಯ ಗತಿಯಲ್ಲಿ ಅಂತರವು ಏಕೆ ಇದೆ? ನೀವು ಏನಾಗಿದ್ದೀರೆಂದು ಹೇಳಿಕೊಳ್ಳುತ್ತೀರಿ? ಕರ್ಮ ಯೋಗಿಯೆಂದೋ ಅಥವಾ ಕೇವಲ ಯೋಗಿಯೆಂದೋ? ಏನಾಗಿದ್ದೀರಿ? ಕರ್ಮಯೋಗಿಯಾಗಿದ್ದೀರಲ್ಲವೇ. ಪಕ್ಕಾ ಆಗಿದ್ದೀರಲ್ಲವೇ? ಹಾಗಾದರೆ ಸೇವೆಯೂ ಸಹ ಏನಾಗಿದೆ? ಕರ್ಮವಾಗಿದೆಯಲ್ಲವೇ. ಕರ್ಮದಲ್ಲಿ ಬರುತ್ತೀರಿ, ಮಾತನಾಡುತ್ತೀರಿ ಅಥವಾ ದೃಷ್ಟಿಯನ್ನು ಕೊಡುತ್ತೀರಿ, ಕೋರ್ಸ್ ಮಾಡಿಸುತ್ತೀರಿ. ಮ್ಯೂಜಿಯಂನಲ್ಲಿ ತಿಳಿವಳಿಕೆ ನೀಡುತ್ತೀರಿ - ಇದೆಲ್ಲವೂ ಏನಾಗಿದೆ? ಶ್ರೇಷ್ಠ ಕರ್ಮ ಅರ್ಥಾತ್ ಸೇವೆ ಹೀಗೆ ಕರ್ಮಯೋಗಿ ಅರ್ಥಾತ್ ಕರ್ಮದ ಸಮಯದಲ್ಲಿಯೂ ಯೋಗದ ಸಮತೋಲನವಿರುವುದು. ಆದರೆ ಬ್ಯಾಲೆನ್ಸ್ ಕಡಿಮೆಯಾಗಿ ಬಿಡುತ್ತದೆಯೆಂದು ಸ್ವಯಂ ನೀವೇ ಹೇಳುತ್ತೀರಿ. ಇದರ ಕಾರಣವು ಏನಾಗಿದೆ? ಇದೇನೂ ಹೊಸ ಸಂಗತಿಯಲ್ಲ. ಚೆನ್ನಾಗಿ ತಿಳಿದುಕೊಂಡಿರುವ ತುಂಬಾ ಹಳೆಯ ಸಂಗತಿಯಾಗಿದೆ. ಬಾಪ್‌ದಾದಾರವರು ಏನು ನೋಡಿದರೆಂದರೆ ಸೇವೆ ಅರ್ಥಾತ್ ಕರ್ಮ ಹಾಗೂ ಸ್ವಪುರುಷಾರ್ಥ ಅರ್ಥಾತ್ ಯೋಗಸ್ಥಿತಿ ಇವೆರಡರ ಬ್ಯಾಲೆನ್ಸ್ ಇಟ್ಟುಕೊಳ್ಳುವ ಸಲುವಾಗಿ ವಿಶೇಷವಾಗಿ ಒಂದೇ ಶಬ್ದವನ್ನು ನೆನಪಿಟ್ಟುಕೊಳ್ಳಿರಿ. ಯಾವುದಾಗಿದೆ? ತಂದೆಯು ಕರಾವನ್ ಹಾರ್ (ಕರ್ತವ್ಯ ಮಾಡಿಸುವವರು) ಆಗಿದ್ದಾರೆ ಹಾಗೂ ನಾನು ಆತ್ಮ ಕರನ್‌ಹಾರ್ (ಕರ್ಮಚಾರಿ) ಆಗಿದ್ದೇನೆ. ಹೀಗೆ ಕರನ್ ಕರಾವನ್ ಹಾರ್ ಎನ್ನುವ ಒಂದು ಶಬ್ದವು ನಿಮ್ಮ ಬ್ಯಾಲೆನ್ಸನ್ನು

ತುಂಬಾ ಸಹಜವಾಗಿ ಸರಿ ಮಾಡಿಬಿಡುವುದು. ಸ್ವಪುರುಷಾರ್ಥದ ಗತಿಯು ಯಾವಾಗಲಾದರೂ ಕಡಿಮೆಯಾದರೆ ಅದರ ಕಾರಣವು ಏನಾಗಿದೆ? ಕರನ್ ಹಾರ್ (ಕರ್ಮಚಾರಿ)ಗೆ ಬದಲಾಗಿ ನಾವೇ ಮಾಡುವವರಾಗಿದ್ದೇವೆ ಎಂದು ತಿಳಿದುಕೊಳ್ಳುತ್ತೀರಿ. ಕರ್ಮಚಾರಿಗೆ ಬದಲಾಗಿ ನಿಮ್ಮನ್ನು ಕರಾವನ್ ಹಾರ್ (ಕರ್ಮೇಂದ್ರಿಯಗಳಿಂದ ಕರ್ಮ ಮಾಡಿಸುವ ಮಾಲಿಕ ಆತ್ಮ) ಆಗಿದ್ದೇನೆ ಎಂದು ತಿಳಿದುಕೊಳ್ಳಬೇಕು. ಯಾವ ಯಾವ ಪ್ರಕಾರದ ಮಾಯೆಯು ಬರುತ್ತದೆಯೋ ಅದು ಪ್ರವೇಶ ಮಾಡುವ ಗೇಟ್ (ಹೆಬ್ಬಾಗಿಲು) ಯಾವುದಾಗಿದೆ? ಮಾಯೆಯು ಬರುವ ಎಲ್ಲಕ್ಕಿಂತಲೂ ಸಹಜವಾದ ಗೇಟ್ ಯಾವುದೆಂದು ತಿಳಿದುಕೊಂಡೇ ಇದ್ದೀರಿ. ಅದು "ನಾನು" ಎನ್ನುವುದೇ ಆಗಿದೆಯಲ್ಲವೇ. ನೀವು ಆ ಗೇಟನ್ನು ಇನ್ನೂ ಪೂರ್ತಿ ಮುಚ್ಚಿಬಿಟ್ಟಿಲ್ಲ. ನೀವು ಹೇಗೆ ಮುಚ್ಚುತ್ತೀರೆಂದರೆ ಮಾಯೆಯು ಸಹಜವಾಗಿಯೇ ತೆರೆದುಕೊಂಡು ಒಳಗೆ ಬರುವಂತೆ ಮುಚ್ಚುತ್ತಿದ್ದೀರಿ. ಒಂದುವೇಳೆ ಕರ್ಮಚಾರಿ ಆಗಿದ್ದರೆ ಕಾರ್ಯವನ್ನು ಮಾಡಿಸುವವರಾದ ತಂದೆಯು ಅವಶ್ಯವಾಗಿ ನೆನಪಿಗೆ ಬರುವರು. ಮಾಡುತ್ತಾ ಇದ್ದೇನೆ. ಆದರೆ ಮಾಡಿಸುವವರು ತಂದೆಯಾಗಿದ್ದಾರೆ. ಕಾರ್ಯ ಮಾಡಿಸುವ ತಂದೆಯು ಜೊತೆಯಲ್ಲಿ ಇಲ್ಲದಿದ್ದರೆ ನಾನು ಕರ್ಮಚಾರಿ ಆಗಲು ಸಾಧ್ಯವಾಗುವುದಿಲ್ಲ. ಹೀಗೆ ಡಬಲ್ ರೂಪದಿಂದ ಕರ್ತವ್ಯ ಮಾಡಿಸುವವರ ಸ್ಮೃತಿಯು ಇರಬೇಕು. 1. ತಂದೆಯು ಕರಾವನ್‌ಹಾರ್ ಆಗಿದ್ದಾರೆ ಹಾಗೂ 2. ನಾನು ಆತ್ಮನೂ ಸಹ ಈ ಕರ್ಮೇಂದ್ರಿಯಗಳ ಮಾಲಿಕ ಕರ್ಮ ಮಾಡಿಸುವ ಮಾಲಿಕನಾಗಿದ್ದೇನೆ. ಈ ಸ್ಮೃತಿಯಿಂದ ಏನಾಗುವುದೆಂದರೆ ಕರ್ಮವನ್ನು ಮಾಡುತ್ತಿದ್ದರೂ ಕರ್ಮದ ಒಳ್ಳೆಯ ಅಥವಾ ಕೆಟ್ಟ ಪ್ರಭಾವದಲ್ಲಿ ಬರುವುದಿಲ್ಲ. ಇದನ್ನೇ ಕರ್ಮಾತೀತ ಸ್ಥಿತಿಯೆಂದು ಕರೆಯಲಾಗುತ್ತದೆ.

ನಿಮ್ಮೆಲ್ಲರ ಲಕ್ಷ್ಯವು ಏನಾಗಿದೆ? ಕರ್ಮಾತೀತರಾಗುವ ಲಕ್ಷ್ಯವಿದೆಯಲ್ಲವೇ. ಅಥವಾ ಇಲ್ಲವೋ? ಸ್ವಲ್ಪ ಸ್ವಲ್ಪ ಕರ್ಮಬಂಧನ ಇದ್ದರೂ ಅಡ್ಡಿಯಿಲ್ಲವೆಂದು ತಿಳಿದಿದ್ದೀರಾ. ಕರ್ಮ ಬಂಧನವು ಅಲ್ಪಸ್ವಲ್ಪ ಇರಬೇಕೋ. ಇರಬಾರದೋ? ಕರ್ಮಾತೀತ ಆಗಬೇಕೆಂದಿದ್ದೀರಾ? ತಂದೆಯೊಂದಿಗೆ ಪ್ರೀತಿಯಿರುವುದರ ಚಿಹ್ನೆಯು ಕರ್ಮಾತೀತ ಆಗುವುದಾಗಿದೆ. ಆದ್ದರಿಂದ ಕರಾವನ್‌ಹಾರ್ (ಕರ್ತವ್ಯ ಮಾಡಿಸುವ ಮಾಲಿಕ) ಆಗಿ ಕರ್ಮ ಮಾಡಿರಿ. ಮಾಡಿಸಿರಿ. ಕರ್ಮೇಂದ್ರಿಯಗಳು ನಿಮ್ಮಿಂದ ಕರ್ಮ ಮಾಡಿಸಬಾರದು. ಆದರೆ ನೀವು ಕರ್ಮೇಂದ್ರಿಯಗಳಿಂದ ಮಾಡಿಸಿರಿ. ನಿಮ್ಮನ್ನು ಸಂಪೂರ್ಣ ಕರ್ಮೇಂದ್ರಿಯಗಳಿಂದ ಅತೀತವಾದ ಅಶರೀರಿ ಆತ್ಮನೆಂದು ತಿಳಿದು ಕರ್ಮ ಮಾಡಿಸಿರಿ. ಈ ಭಾವನೆಯು ಪ್ರತ್ಯಕ್ಷ ರೂಪದಲ್ಲಿ ಇರಬೇಕು ಗುಪ್ತವಾಗಿ ಇರಬಾರದು. ಗುಪ್ತ ರೂಪದಲ್ಲಿ ಆಗಾಗ "ಮಾಡಿಸುವವರು" ಇದಕ್ಕೆ ಬದಲಾಗಿ ಕರ್ಮೇಂದ್ರಿಯಗಳು ಅರ್ಥಾತ್ ಮನಸ್ಸು, ಬುದ್ಧಿ, ಸಂಸ್ಕಾರಗಳಿಗೆ ವಶವಾಗಿ ಬಿಡುತ್ತಿದ್ದೀರಿ. ಕಾರಣವೇನು? ಮಾಡಿಸುವ ಆತ್ಮನಾಗಿದ್ದೇನೆ. ಮಾಲಿಕನಾಗಿದ್ದೇನೆ. ವಿಶೇಷ ಆತ್ಮ, ಮಾಸ್ಟರ್ ಸರ್ವಶಕ್ತಿವಂತ ಆತ್ಮನಾಗಿದ್ದೇನೆ ಎನ್ನುವ ಸ್ಮೃತಿಯು ಮಾಲಿಕತನದ ಸ್ಮೃತಿಯನ್ನು ತಂದುಕೊಡುತ್ತದೆ. ಇಲ್ಲದಿದ್ದರೆ ಒಮ್ಮೊಮ್ಮೆ ಮನಸ್ಸು ನಿಮ್ಮನ್ನು ನಡೆಸುತ್ತದೆ ಹಾಗೂ ಒಮ್ಮೊಮ್ಮೆ ನೀವು ಮನಸ್ಸನ್ನು ನಡೆಸುತ್ತೀರಿ. ಆದ್ದರಿಂದ ಸದಾ ಸ್ವಾಭಾವಿಕವಾಗಿ ಮನ್ಮನಾಭವದ ಸ್ಥಿತಿಯು ಇರುವುದಿಲ್ಲ. ನಾನು ಸಂಪೂರ್ಣ ಅತೀತ ಆಗಿದ್ದೇನೆ ಹಾಗೂ ಕೇವಲ ಅತೀತವಷ್ಟೇ ಅಲ್ಲ ಆದರೆ ಮಾಲಿಕನಾಗಿದ್ದೇನೆ. ತಂದೆಯನ್ನು ನೆನಪು ಮಾಡುವಾಗ ಬಾಲಕನಾಗಿದ್ದೇನೆ. ಹಾಗೂ ನಾನು ಆತ್ಮನು ಕರ್ಮೇಂದ್ರಿಯಗಳಿಂದ ಕರ್ಮ

ಮಾಡಿಸುವವನಾಗಿರುವುದರಿಂದ ಮಾಲಿಕನಾಗಿದ್ದೇನೆ. ಇನ್ನೂ ಈ ಅಭ್ಯಾಸದ ಬಗ್ಗೆ ಗಮನ ಕಡಿಮೆ ಇದೆ. ಸೇವೆಯಲ್ಲಿ ತುಂಬಾ ಚೆನ್ನಾಗಿ ತತ್ಪರರಾಗಿದ್ದೀರಿ. ಆದರೆ ಲಕ್ಷ್ಯವು ಏನಾಗಿದೆ? ಸೇವಾಧಾರಿಯಾಗಬೇಕೆನ್ನುವ ಲಕ್ಷ್ಯವಿದೆಯೋ ಅಥವಾ ಕರ್ಮಾತೀತ ಆಗಬೇಕೆನ್ನುವ ಲಕ್ಷ್ಯವಿದೆಯೋ? ಅಥವಾ ಎರಡೂ ಜೊತೆ ಜೊತೆಯಲ್ಲಿ ಆಗುವಿರೋ? ಈ ಅಭ್ಯಾಸ ಪಕ್ಕಾ ಆಗಿದೆಯೇ? ಇದೀಗಲೇ ಈ ಅಭ್ಯಾಸವನ್ನು ಸ್ವಲ್ಪ ಸಮಯದವರೆಗೆ ಮಾಡಬಲ್ಲಿರಾ? ಕರ್ಮೇಂದ್ರಿಯಗಳಿಂದ ಭಿನ್ನ ಅಶರೀರಿ ಆತ್ಮ ಆಗಬಲ್ಲಿರಾ? ಅಥವಾ ಒಶರೀರದಿಂದ ಅತೀತವಾಗಲು (ಡಿಟ್ಯಾಚ್) ಸಮಯವನ್ನು ತೆಗೆದುಕೊಳ್ಳುವಷ್ಟು ಶರೀರದೊಂದಿಗೆ ಆಟ್ಯಾಚ್ (ಮೋಹ ಮಮತೆಯುಳ್ಳವರು) ಆಗಿದ್ದೀರೋ? ಶರೀರದಿಂದ ಅತೀತವಾಗಲು ನಿಮಗೆ ಸಾಧ್ಯವಾಗುತ್ತದೆಯೇ? ಎಷ್ಟು ಸಮಯದಲ್ಲಿ ಆಗಬಲ್ಲಿರಿ? ಐದು ನಿಮಿಷಗಳು ಬೇಕೇ? ಅಥವಾ ಒಂದು ನಿಮಿಷ ಬೇಕೋ ಅಥವಾ ಒಂದು ಸೆಕೆಂಡ್ ಬೇಕೋ? ಒಂದು ಸೇಕೆಂಡ್‌ನಲ್ಲಿ ಅಶರೀರಿ ಆಗಬಲ್ಲಿರಾ? ಹಿಂದೆ ಕುಳಿತುಕೊಂಡಿರುವವರು ಆಗಬಲ್ಲಿರಾ?'ಒಒ

ಪಾಂಡವರು ಒಂದು ಸೆಕೆಂಡಿನಲ್ಲಿ ಸಂಪೂರ್ಣ ಅತೀತ (ಆಶರೀರಿ) ಆಗಬಲ್ಲಿರಾ? ಆತ್ಮವು ಶರೀರದಿಂದ ಅತೀತವಾದ ಮಾಲಿಕ ಹಾಗೂ ಕರ್ಮೇಂದ್ರಿಯಗಳು ಕರ್ಮಚಾರಿಗಳು ಆಗಿವೆ ಎನ್ನುವ ಅಭ್ಯಾಸವು ಯಾವಾಗ ಬೇಕಾದರೆ ಆಗ ಇರಬೇಕು. ಒಳ್ಳೆಯದು. ಈಗಲೇ ಒಂದು ಸೆಕೆಂಡಿನಲ್ಲಿ ಆಶರೀರಿ ಹಾಗೂ ತಂದೆಗೆ ಪ್ರಿಯರು ಆಗಿಬಿಡಿ. ಶಕ್ತಿಪೂರ್ಣವಾದ ಅಭ್ಯಾಸ ಮಾಡಿರಿ. ನಾನು ಶರೀರದಿಂದ ಅತೀತವಾದ ಆತ್ಮ ಆಗಿಯೇ ಇದ್ದೇನೆ. ಈ ಕರ್ಮೇಂದ್ರಿಯಗಳು ನನ್ನ ಸಹಯೋಗಿಗಳಾಗಿವೆ. ಕರ್ಮದ ಸಾಥಿ(ಜೊತೆ)ಯಾಗಿವೆ. ಆದರೆ ನಾನು ಅಶರೀರೀ ಆತ್ಮ ಆಗಿದ್ದೇನೆ ಹಾಗೂ ತಂದೆಗೆ ಪ್ರಿಯನಾಗಿದ್ದೇನೆ. ಈಗಲೇ ಒಂದು ಸೆಕೆಂಡಿನಲ್ಲಿ ಅಭ್ಯಾಸವನ್ನು ಪುನಃ ಮಾಡಿರಿ. ಮಾಡುವುದು ಸಹಜವೆನಿಸುತ್ತದೆಯೇ ಅಥವಾ ಕಷ್ಟವಾಗಿದೆಯೋ? ಸಹಜವಾಗಿದ್ದರೆ ಇಡೀ ದಿನದಲ್ಲಿ ಕರ್ಮ ಮಾಡುವ ಸಮಯದಲ್ಲಿ ಈ ಸ್ಮೃತಿಯನ್ನು ಪ್ರತ್ತಕ್ಷಗೊಳಿಸಿದರೆ ಕರ್ಮಾತೀತ ಸ್ಥಿತಿಯನ್ನು ಸಹಜವಾಗಿ ಅನುಭವ ಮಾಡುವಿರಿ. ಸೇವೆ ಅಥವಾ ಕರ್ಮವನ್ನು ಬಿಡಬಲ್ಲಿರಾ? ಬಿಡುವಿರೇ? ಮಾಡಲೇಬೇಕು. ತಪಸ್ಸಿನಲ್ಲಿ ಕುಳಿತು ಕೊಳ್ಳುವುದೂ ಸಹ ಕರ್ಮವಾಗಿದೆ. ಕರ್ಮವನ್ನು ಮಾಡದೇ ಅಥವಾ ಸೇವೆಯನ್ನು ಮಾಡದೇ ಇರಲು ಸಾಧ್ಯವಾಗುವುದಿಲ್ಲ ಹಾಗೂ ಇರಲೂಬಾರದು. ಏಕೆಂದರೆ ಸಮಯವು ಕಡಿಮೆ ಇದೆ. ಹಾಗೂ ಸೇವೆಯು ಇನ್ನೂ ತುಂಬಾ ಇದೆ. ಸೇವೆಯ ರೂಪುರೇಷೆಯು ಬದಲಾಗಿದೆ. ಆದರೆ ಈಗಲೂ ಸಹ ಅನೇಕ ಆತ್ಮರ ಆಕ್ಷೇಪಣೆಯು ಉಳಿದುಬಿಟ್ಟಿದೆ. ಆದ್ದರಿಂದ ಸೇವೆ ಹಾಗೂ ಸ್ವಪುರುಷಾರ್ಥದ ಬ್ಯಾಲೆನ್ಸ್ (ಸಮತೋಲನ) ಇಟ್ಟುಕೊಳ್ಳಿರಿ. ಸೇವೆಯಲ್ಲಿ ನಾನು ತುಂಬಾ ವ್ಯಸ್ತನಾಗಿ (ಬಿಜಿಯಾಗಿ) ಬಿಟ್ಟಿದ್ದೇನಲ್ಲವೇ. ಆದ್ದರಿಂದ ಸ್ವಪುರುಷಾರ್ಥವು ಕಡಿಮೆಯಾಗಿ ಬಿಟ್ಟಿತು ಎಂದು ಹೇಳುವುದು ಸರಿಯಲ್ಲ. ಸೇವೆಯಲ್ಲಿ ಸ್ವಪುರುಷಾರ್ಥದ ಬಗ್ಗೆ ಗಮನವು ಇನ್ನೂ ಅಧಿಕವಾಗಿರಬೇಕು. ಏಕೆಂದರೆ ಸೇವೆಯಲ್ಲಿ ಮಾಯೆಗೆ ಅನೇಕ ಪ್ರಕಾರದಿಂದ ಬರುವ ಅವಕಾಶವು ಇರುತ್ತದೆ. ಹೆಸರು ಸೇವೆಯೆಂದು ಇದ್ದರೂ ಸ್ವಾರ್ಥವಿರುತ್ತದೆ. ನಿಮ್ಮ ಉನ್ನತಿ ಮಾಡಿಕೊಳ್ಳಿರಿ. ಉನ್ನತಿ ಮಾಡಿಕೊಳ್ಳುತ್ತಾ ಬ್ಯಾಲೆನ್ಸನ್ನು ಮರೆಯಬೇಡಿರಿ. ಏಕೆಂದರೆ ಸೇವೆಯಲ್ಲಿಯೇ ಸ್ವಭಾವ, ಸಂಬಂಧದ ವಿಸ್ತಾರವಾಗುತ್ತದೆ ಹಾಗೂ ಮಾಯೆಯು ಅವಕಾಶವನ್ನೂ ತೆಗೆದುಕೊಳ್ಳುತ್ತದೆ. ಸ್ವಲ್ಪ ಬ್ಯಾಲೆನ್ಸ್ ಕಡಿಮೆಯಾದರೂ ಮಾಯೆಯು ಹೊಸ ಹೊಸ ರೂಪವನ್ನು ಧಾರಣೆ

ಮಾಡಿಬಿಡುತ್ತದೆ. ಹಳೆಯ ರೂಪದಲ್ಲಿ ಬರುವುದಿಲ್ಲ. ಹೊಸ ಹೊಸ ರೂಪದಲ್ಲಿ, ಹೊಸ ಹೊಸ ಪರಿಸ್ಥಿತಿಯ ರೂಪದಲ್ಲಿ, ಸಂಪರ್ಕದ ರೂಪದಲ್ಲಿ ಬರುತ್ತದೆ. ಸೇವೆಯನ್ನು ಬಿಟ್ಟುಕೊಟ್ಟರೆ ನಿಮ್ಮನ್ನು ಬಾಪ್‌ದಾದಾ ಸ್ವಪುರುಷಾರ್ಥದಲ್ಲಿ ಪ್ರತ್ಯೇಕವಾಗಿ ಒಂದು ಮಾಸದವರೆಗೆ ಕೂಡಿಸಿದರೆ, 15 ದಿನಗಳವರೆಗೆ ಕೂಡಿಸಿದರೆ, ಕರ್ಮಾತೀತ ಆಗಿಬಿಡುವಿರಾ? ಏನೂ ಮಾಡಬೇಡಿರಿ, ಕುಳಿತುಕೊಂಡಿರಿ, ತಪಸ್ಸು ಮಾಡಿರಿ, ಅಡುಗೆಯನ್ನೂ ಒಂದುಸಲ ಮಾಡಿದರೆ ಸಾಕು ಒಂದು ತಿಂಗಳು ಸೇವೆಯಿಂದ ಬಿಡುವು ಕೊಡೋಣವೇ? ಹೀಗೆ ಮಾಡಿದರೆ ಕರ್ಮಾತೀತ ಆಗಿಬಿಡುವಿರಾ? ಆಗುವುದಿಲ್ಲವೇ?

ಒಂದುವೇಳೆ ಬ್ಯಾಲೆನ್ಸ್‌ನ ಅಭ್ಯಾಸವಿಲ್ಲದಿದ್ದರೆ, ಒಂದು ತಿಂಗಳಷ್ಟೇ ಅಲ್ಲ ಎರಡು ತಿಂಗಳುಗಳವರೆಗೆ ತಪಸ್ಸಿನಲ್ಲಿ ಕುಳಿತು ಬಿಟ್ಟರೂ ಮನಸ್ಸು ತಪಸ್ಸಿನಲ್ಲಿ ಸ್ಥಿತವಾಗುವುದಿಲ್ಲ. ತನುವು ಕುಳಿತುಕೊಂಡಿರುತ್ತದೆ ಆದರೆ ಮಾಡಬೇಕಾಗಿರುವುದು ಕೇವಲ ತನುವನ್ನೋ ಅಥವಾ ಮನಸ್ಸನ್ನೋ? ತನುವಿನ ಜೊತೆಯಲ್ಲಿ ಮನಸ್ಸನ್ನೂ ಸಹ ಸ್ಥಿತ ಮಾಡಿರಿ. ತಂದೆ ಹಾಗೂ ನಾನು ಇಬ್ಬರೇ ಇದ್ದೇವೆ. ಅನ್ಯರು ಯಾರೂ ಇಲ್ಲ ಎನ್ನುವ ಸ್ಥಿತಿಯಲ್ಲಿ ಮನಸ್ಸು ಸ್ಥಿತವಾಗಿ ಬಿಡಲಿ. ಹೀಗೆ ಒಂದು ತಿಂಗಳು ಇಂತಹ ತಪಸ್ಸನ್ನು ಮಾಡಬಲ್ಲಿರಾ? ಅಥವಾ ಸೇವೆಯು ನೆನಪಿಗೆ ಬರುವುದೋ? ಬಾಪ್‌ದಾದಾರವರು ಹೇಳುತ್ತಾರೆ ಅಥವಾ ನಾಟಕವು ದಿನಪ್ರತಿದಿನವೂ ಸೇವೆಯು ವೃದ್ಧಿಯಾಗಲಿದೆಯೆಂದು ತೋರಿಸುತ್ತಿದೆಯೇ ಅಥವಾ ಕಡಿಮೆಯಾಗಲಿದೆಯೆಂದೋ? ವೃದ್ಧಿಯಾಗಲಿದೆಯಲ್ಲವೇ. ಆದ್ದರಿಂದ ಹೇಗೆ ಕುಳಿತು ಬಿಡುವಿರಿ? ಒಂದು ವರ್ಷದ ಹಿಂದೆ ನಿಮ್ಮ ಸೇವೆಯು ಏನಿತ್ತೋ ಹಾಗೂ ಈ ವರ್ಷದಲ್ಲಿ ಏನು ಸೇವೆ ಮಾಡಿದಿರೋ ಅದು ವೃದ್ಧಿಯಾಗಿದೆಯೋ ಅಥವಾ ಕಡಿಮೆಯಾಗಿದೆಯೋ? ವೃದ್ಧಿಯಾಗಿದೆಯಲ್ಲವೇ ಬಯಸದಿದ್ದರೂ ಸೇವೆಯ ಬಂಧನದಲ್ಲಿ ಬಂಧಿತರಾಗಿದ್ದೀರಿ. ಆದರೆ ಸೇವೆಯ ಬಂಧನವು ಬ್ಯಾಲೆನ್ಸ್‌ನ ಬಂಧನಕ್ಕೆ ಬದಲಾಗಿ ಸೇವೆಯ ಸಂಬಂಧವಿರುವುದು, ಬಂಧನವಲ್ಲ. ಹೇಗೆ ಲೌಕಿಕ ಸಂಬಂಧದಲ್ಲಿ ಒಂದನೆಯದಾಗಿ ಸಂಬಂಧವಿರುತ್ತದೆ. ಇನ್ನೊಂದು ಕರ್ಮಬಂಧನವಿರುತ್ತದೆ ಹಾಗೂ ಮತ್ತೊಂದು ಸೇವೆಯ ಸಂಬಂಧದಲ್ಲಿ ಬಂಧನದ ಅನುಭವವಾಗುವುದಿಲ್ಲ. ಸೇವೆಯ ಮಧುರವಾದ ಸಂಬಂಧವಿದೆ. ಆದ್ದರಿಂದ ಏನು ಗಮನ ನೀಡುವಿರಿ? ಸೇವೆ ಹಾಗೂ ಸ್ವಪುರುಷಾರ್ಥದ ಬ್ಯಾಲೆನ್ಸ್ ಇಟ್ಟುಕೊಳ್ಳಬೇಕೆಂದು. ಸೇವೆಯ ಅತಿಯಲ್ಲಿ ಹೋಗಬೇಡಿರಿ. ನಾನೇ ಮಾಡಬೇಕಾಗುತ್ತದೆ. ನಾನೇ ಮಾಡಬಲ್ಲೆನು ಎಂದು ತಿಳಿಯುವುದು ಸರಿಯಲ್ಲ. ಮಾಡಿಸುವವರು ಮಾಡಿಸುತ್ತಾ ಇದ್ದಾರೆ. ನಾನು ಕೇವಲ ನಿಮಿತ್ತ ಕರನ್ ಹಾರ್ (ಕರ್ಮಚಾರಿ) ಆಗಿದ್ದೇನೆ ಎಂಬ ಸ್ಮೃತಿಯಿರಬೇಕು. ಜವಾಬ್ದಾರಿಯೂ ಕಡಿಮೆ. ದಣಿವೂ ಕಡಿಮೆಯಾಗುತ್ತದೆ. ಅನೇಕ ಮಕ್ಕಳು ಏನು ಹೇಳುತ್ತಾರೆಂದರೆ, ತುಂಬಾ ಸೇವೆ ಮಾಡಿದ್ದೇನಲ್ಲವೇ ಆದ್ದರಿಂದ ದಣಿದಿದ್ದೇನೆ ಎಂದು, ತಲೆಯು ಭಾರವಾಗಿ ಬಿಟ್ಟಿದೆ ಎಂದು ಹೇಳುತ್ತಾರೆ. ಆದರೆ ಯಥಾರ್ಥವಾದ ಸ್ಮೃತಿಯಿಂದ ತಲೆಯು ಭಾರವಾಗುವುದಿಲ್ಲ. ಅದಕ್ಕೆ ಬದಲಾಗಿ ಕರಾವನ್ ಹಾರ್ ಆಗಿರುವ ತಂದೆಯು ತುಂಬಾ ಚೆನ್ನಾಗಿ ಮಸಾಜ್ ಮಾಡುತ್ತಾರೆ ಹಾಗೂ ಬುದ್ಧಿಯು ಇನ್ನೂ ಫ್ರೆಷ್ ಆಗಿಬಿಡುವುದು. ದಣಿವಾಗುವುದಿಲ್ಲ. ವಿಶೇಷ ಶಕ್ತಿಯು ಬರುವುದು. ಹೇಗೆ ವೈಜ್ಞಾನಿಕ ಔಷಧಗಳಿಂದ ಶರೀರದಲ್ಲಿ ಶಕ್ತಿಯು ಬರಲು ಸಾಧ್ಯವಿದೆಯೋ ಹಾಗೆ ತಂದೆಯ ನೆನಪಿನಿಂದ ಆತ್ಮದಲ್ಲಿ ಶಕ್ತಿಯು ಬರಲು ಸಾಧ್ಯವಿಲ್ಲವೇ? ಹಾಗೂ ಆತ್ಮದಲ್ಲಿ ಶಕ್ತಿಯು ಬಂದರೆ, ಶರೀರದ ಮೇಲೆ ಸ್ವತಃವಾಗಿ ಪ್ರಭಾವವಾಗುತ್ತದೆ.

ಒಮ್ಮೊಮ್ಮೆಯಾದರೂ ಅನುಭವವಾಗುತ್ತದೆ. ಅನುಭವಿಯೂ ಆಗಿದ್ದೀರಿ. ಆಮೇಲೆ ನಡೆಯುತ್ತಾ ನಡೆಯುತ್ತಾ ಲೈನ್ ಬದಲಾವಣೆಯಾಗಿ ಬಿಡುತ್ತದೆ. ಹಾಗೂ ಗೊತ್ತೆ ಆಗುವುದಿಲ್ಲ. ಯಾವಾಗ ಏನಾದರೂ ಬೇಸರ, ಬಳಲಿಕೆ ಅಥವಾ ತಲೆಯ ಭಾರವಾಗುತ್ತದೆಯೋ ಆಗ ಪ್ರಶ್ನೆಯು ಬರುತ್ತದೆ. ಇದೇನಾಯಿತು? ಏಕೆ ಆಯಿತು? ಎಂದು ಅರಿವಿನಲ್ಲಿ ಬರುತ್ತೀರಿ ಆದರೆ ಕೇವಲ ಒಂದು ಶಬ್ದವನ್ನು ಮಾಡುವವರು ಹಾಗೂ ಮಾಡಿಸುವವರು ಎಂಬುದನ್ನು ನೆನಪು ಮಾಡಿರಿ, ಕಷ್ಟವಾಗುತ್ತದೆಯೇ? ಅಥವಾ ಸಹಜವಾಗಿದೆಯೋ? ಸಹಜವಾಗಿದೆಯೆಂದು ಹೇಳಿರಿ. ಹಿಂದೆ ಕುಳಿತವರು ಹೇಳಿದಿರಾ? (ಎಲ್ಲರೂ ಸಹಜವಾಗಿದೆಯೆಂದು ಜೋರಾಗಿ ಹೇಳಿದರು).ಹಿಂದು

ಈಗ 9 ಲಕ್ಷ ಪ್ರಜೆಗಳನ್ನು ತಯಾರು ಮಾಡಿದ್ದೀರಾ? ವಿದೇಶದಲ್ಲಿ ಎಷ್ಟು ತಯಾರಾಗಿದ್ದಾರೆ? 9 ಲಕ್ಷ ತಯಾರಾಗಿದ್ದಾರೆಯೇ? ಹಾಗೂ ಭಾರತದಲ್ಲಿ ತಯಾರಾಗಿದ್ದಾರೆಯೇ? ತಯಾರಾಗಿಲ್ಲ. ನೀವೇ ಸಮಾಪ್ತಿಯ ಮುಳ್ಳನ್ನು ಮುಂದೆ ಹೋಗಲು ಬಿಡುವುದಿಲ್ಲ. ಬ್ಯಾಲೆನ್ಸ್ ಇಟ್ಟುಕೊಳ್ಳಿರಿ. ಡೈಮಂಡ್ ಜೂಬ್ಲಿಯಾಗಿರುವುದರಿಂದ ಚೆನ್ನಾಗಿ ಸೇವೆ ಮಾಡಿರಿ. ಆದರೆ ಬ್ಯಾಲೆನ್ಸ್ ಇಟ್ಟುಕೊಂಡು ಸೇವೆ ಮಾಡಿದರೆ ಪ್ರಜೆಗಳು ಬೇಗ ತಯಾರಾಗುವರು. ಸಮಯ ಹಿಡಿಯುವುದಿಲ್ಲ. ಪ್ರಕೃತಿಯೂ ತುಂಬಾ ಬಳಲಿ ಹೋಗಿದೆ. ಆತ್ಮರೂ ಸಹ ನಿರಾಶರಾಗಿ ಬಿಟ್ಟಿದ್ದಾರೆ. ಹೀಗೆ ನಿರಾಶರಾದಾಗ ಯಾರನ್ನು ನೆನಪು ಮಾಡುತ್ತಾರೆ? ಭಗವಂತ ತಂದೆಯನ್ನು ನೆನಪು ಮಾಡುತ್ತಾರೆ. ಆದರೆ ಅವರ ಪೂರ್ತಿ ಪರಿಚಯವಿಲ್ಲದಿರುವ ಕಾರಣ ನಿಮ್ಮನ್ನು ಎಂದರೆ ದೇವೀ ದೇವತೆಗಳನ್ನು ಹೆಚ್ಚು ನೆನಪು ಮಾಡುತ್ತಾರೆ. ಇಂತಹ ನಿರಾಶರಾಗಿರುವ ಆತ್ಮರ ಮೊರೆಯು ನಿಮಗೆ ಕೇಳಿಬರುವುದಿಲ್ಲವೇ? ಕೇಳಿಬರುತ್ತದೆಯೋ ಅಥವಾ ಹವ್ಯಾಸದಲ್ಲಿಯೇ ಮಗ್ನರಾಗಿದ್ದೀರೋ? ದಯಾಪೂರ್ಣರಾಗಿದ್ದೀರಲ್ಲವೇ. ತಂದೆಯನ್ನು ಏನೆಂದು ಕರೆಯುತ್ತೀರಿ? ದಯಾಪೂರ್ಣ, ದಯಾಸಾಗರನೆಂದು ಹಾಗೂ ಸರ್ವ ಧರ್ಮದವರೂ ದಯೆಯನ್ನು ಅವಶ್ಯವಾಗಿ ಬೇಡುತ್ತಾರೆ. ಯಾವುದೇ ಧರ್ಮದವರಾಗಿದ್ದರೂ ಸುಖವನ್ನು ಬೇಡುವುದಿಲ್ಲ. ಎಲ್ಲರಿಗೂ ದಯೆಯ ಅಗತ್ಯವಿದೆ. ಹಾಗಾದರೆ ಕೊಡುವವರು ಯಾರಾಗಿದ್ದಾರೆ? ನೀವು ಕೊಡುವವರಾಗಿದ್ದೀರಲ್ಲವೇ? ಅಥವಾ ತೆಗೆದುಕೊಳ್ಳುವವರಾಗಿದ್ದೀರೋ? ತೆಗೆದುಕೊಂಡು ಕೊಡುವವರಾಗಿದ್ದೀರಿ. ದಾತಾನ ಮಕ್ಕಳಾಗಿದ್ದೀರಲ್ಲವೇ. ಆದ್ದರಿಂದ ನಿಮ್ಮ ಸೋದರ ಸೋದರಿಯರ ಮೇಲೆ ದಯಾ ಹೃದಯರಾಗಿರಿ. ಹಾಗೂ ದಯಾಹೃದಯರಾಗಿ ಸೇವೆ ಮಾಡಿದರೆ ಅದರಲ್ಲಿ ನಿಮಿತ್ತಭಾವವು ಸ್ವತಃವಾಗಿಯೇ ಇರುವುದು. ಯಾರು ಎಷ್ಟೇ ಕೆಟ್ಟವರಾಗಿದ್ದರೂ ಒಂದುವೇಳೆ ನಿಮಗೆ ಆ ಆತ್ಮನ ಬಗ್ಗೆ ದಯೆಯಿದ್ದರೆ, ನಿಮಗೆ ಅವರ ಬಗ್ಗೆ ಎಂದೂ ತಿರಸ್ಕಾರ ಅಥವಾ ಅಸಹ್ಯ, ಕ್ರೋಧದ ಭಾವನೆಯು ಬರುವುದಿಲ್ಲ. ದಯೆಯ ಭಾವನೆಯು ಸಹಜವಾಗಿ ನಿಮಿತ್ತ ಭಾವವನ್ನು ಪ್ರತ್ಯಕ್ಷಗೊಳಿಸಿ ಬಿಡುತ್ತದೆ. ಸ್ವಾರ್ಥಪರವಾದ ದಯೆಯಲ್ಲ, ಆದರೆ ಸತ್ಯವಾದ ದಯೆಯಿರಬೇಕು. ಸ್ವಾರ್ಥವಿರುವ ದಯೆಯೂ ಇರುತ್ತದೆ. ಅಂತರ್ಯದಲ್ಲಿ ಯಾರಾದರೂ ಆತ್ಮನ ಬಗ್ಗೆ ಆಸಕ್ತಿ ಅಥವಾ ಆಕರ್ಷಣೆಯಿರುತ್ತದೆ. ಆದರೆ ದಯೆಯು ಉತ್ಪನ್ನವಾಗುತ್ತಿದೆ ಎಂದು ತಿಳಿದುಕೊಳ್ಳುತ್ತಾರೆ. ಅದು ಸ್ವಾರ್ಥವಿರುವ ದಯೆಯಾಯಿತು. ಸತ್ಯವಾದ ದಯೆಯಲ್ಲಿ ಯಾವ ಆಕರ್ಷಣೆಯೂ ಇರುವುದಿಲ್ಲ. ಯಾವ ದೇಹಾಭಿಮಾನವೂ ಇರುವುದಿಲ್ಲ. ಆತ್ಮನು ಅತ್ಮನ ಮೇಲೆ ದಯೆ ಮಾಡುತ್ತಿದ್ದಾರೆ. ದೇಹ ಅಭಿಮಾನ ಅಥವಾ ದೇಹದ ಯಾವುದೇ ಆಕರ್ಷಣೆಯ ನಾಮರೂಪಗಳು ಇರುವುದಿಲ್ಲ. ಒಬ್ಬೊಬ್ಬರಿಗೆ ಆಕರ್ಷಣೆಯು

ದೇಹದೊಂದಿಗೆ ಇರುತ್ತದೆ ಹಾಗೂ ಒಬ್ಬೊಬ್ಬರಿಗೆ ಗುಣಗಳೊಂದಿಗೆ ಆಕರ್ಷಣೆಯಾಗುತ್ತದೆ. ವಿಶೇಷತೆಯೊಂದಿಗೂ ಆಕರ್ಷಣೆಯಾಗುತ್ತದೆ. ಆದರೆ ವಿಶೇಷತೆ ಅಥವಾ ಗುಣಗಳನ್ನು ಕೊಡುವವರು ಯಾರಾಗಿದ್ದಾರೆ? ಆತ್ಮವಂತೂ ಎಷ್ಟೇ ಶ್ರೇಷ್ಠವಾಗಿದ್ದರೂ ತೆಗೆದುಕೊಳ್ಳುವವರಾಗಿದ್ದಾರೆ. ತಂದೆಯಿಂದ ತೆಗೆದುಕೊಂಡಿದ್ದಾರೆ. ವಿಶೇಷತೆಯು ತಮ್ಮ ಸ್ವಂತದ್ದಲ್ಲ. ತಂದೆಯು ಕೊಟ್ಟಿರುವುದಾಗಿದೆ. ಆದ್ದರಿಂದ ನೇರವಾಗಿ (ಡೈರೆಕ್ಟ್) ದಾತನಿಂದ ಏಕೆ ತೆಗೆದುಕೊಳ್ಳಬಾರದು. ಆದ್ದರಿಂದ ಸ್ವಾರ್ಥದ ದಯೆಯಿರಬಾರದು ಎಂದು ನಿಮಗೆ ತಿಳಿಸಲಾಯಿತು. ಅನೇಕ ಮಕ್ಕಳು ಅಂತಹ ಬಿಂಕ-ತುಂಟಾಟ ತೋರಿಸುತ್ತಾರೆ. ಆಂತರ್ಯದಲ್ಲಿ ಸ್ವಾರ್ಥವಿರುತ್ತದೆ. ಆದರೆ ನನಗೆ ದಯೆಯು ಉತ್ಪನ್ನವಾಗುತ್ತದೆಯೆಂದು ಹೇಳುತ್ತಾರೆ. ಬೇರೆ ಏನೂ ಇಲ್ಲ. ಕೇವಲ ದಯಾಭಾವವಿದೆಯೆಂದು ಹೇಳುತ್ತಾರೆ. ಆದರೆ ನಿಸ್ವಾರ್ಥವಾದ ದಯೆಯಿದೆಯೇ ಎಂದು ಪರಿಶೀಲನೆ ಮಾಡಿರಿ. ಆಕರ್ಷಣಾರಹಿತವಾದ ದಯೆಯಿದೆಯೇ? ಯಾವುದಾದರೂ ಅಲ್ಪಕಾಲದ ಪ್ರಾಪ್ತಿಯ ಕಾರಣದಿಂದ ದಯೆ ತೋರಿಸುತ್ತಿಲ್ಲ ತಾನೇ? ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಆಮೇಲೆ ಏನು ಹೇಳುತ್ತಾರೆಂದರೆ, ತುಂಬಾ ಉತ್ತಮರಾಗಿದ್ದಾರಲ್ಲವೇ. ಆದ್ದರಿಂದ ಸ್ವಲ್ಪ... ಆದರೆ ಸ್ವಲ್ಪ ಆಕರ್ಷಣೆ ಮಮತೆಗೂ ಅನುಮತಿಯಿಲ್ಲ. ಒಂದುವೇಳೆ ಕರ್ಮಾತೀತ ಆಗಬೇಕೆಂದಿದ್ದರೆ, ಈ ಎಲ್ಲಾ ಅಡ್ಡಿಗಳನ್ನೂ ನಿವಾರಣೆ ಮಾಡಿಕೊಳ್ಳಿರಿ. ಇವು ದೇಹ ಅಭಿಮಾನದಲ್ಲಿ ಕರೆತರುತ್ತವೆ. ಉತ್ತಮರಾಗಿದ್ದಾರೆ. ಆದರೆ ಉತ್ತಮರನ್ನಾಗಿ ಮಾಡುವವರು ಯಾರಾಗಿದ್ದಾರೆ? ಒಳ್ಳೆಯದನ್ನು ವಿಶೇಷತೆಯನ್ನು ಧಾರಣೆ ಮಾಡಲು ಅಡ್ಡಿಯಿಲ್ಲ. ಆದರೆ ಆ ವಿಶೇಷತೆಗೆ ಪ್ರಭಾವಿತರಾಗದೆ ಅತೀತ ಮತ್ತು ತಂದೆಗೆ ಪ್ರಿಯರಾಗಿ ಇರಿ. ಯಾರು ತಂದೆಯಲ್ಲಿ ಪ್ರೀತಿಯುಳ್ಳವರಾಗಿದ್ದಾರೋ ಹಾಗೂ ತಂದೆಗೆ ಪ್ರಿಯರಾಗಿದ್ದಾರೋ ಅವರು ಸದಾ ಸುರಕ್ಷಿತರಾಗಿರುತ್ತಾರೆ. ತಿಳಿಯಿತೇ?

ಒಂದುವೇಳೆ ಸೇವೆಯನ್ನು ವೃದ್ಧಿ ಮಾಡುವುದಾದರೆ, ವಾಸ್ತವವಾಗಿ ವೃದ್ಧಿ ಮಾಡಲೇಬೇಕು. ಸ್ಥಾಪನೆಯನ್ನೂ ಸಮೀಪಕ್ಕೆ ತರಬೇಕೋ ಇಲ್ಲವೋ ಯಾರು ಸಮೀಪಕ್ಕೆ ತರುತ್ತಾರೆ? ತಂದೆಯು ತರುತ್ತಾರೇಯೇ? ತರುವವು ಸಾಥಿಗಳಿದ್ದಾರಲ್ಲವೇ. ಸಾಥಿಯಾಗಿರುವ ನೀವು ಮಕ್ಕಳಿಲ್ಲದೆ ಏಕಾಂಗಿಯಾಗಿ ತಂದೆಯೂ ಸಹ ಏನು ಮಾಡಲು ಸಾಧ್ಯವಾಗುವುದಿಲ್ಲ. ನೋಡಿರಿ ತಂದೆಯು ಒಂದುವೇಳೆ ಜ್ಞಾನವನ್ನು ತಿಳಿಸಿಕೊಡಬೇಕಾದರೂ ಸಹ ಶರೀರದ ಜೊತೆಯನ್ನು ತೆಗೆದುಕೊಳ್ಳಬೇಕಾಗುತ್ತದೆ: ಜೊತೆಯಿಲ್ಲದಿದ್ದರೆ ಮಾತನಾಡಲು ಸಾಧ್ಯವಿದೆಯೇ? ಅದು ಹಳೆಯ ಗಾಡಿಯೇ ಆಗಿರಬಹುದು ಅಥವಾ ಚೆನ್ನಾಗಿಯೇ ಇರಬಹುದು ಆದರೆ ಆಧಾರವನ್ನಂತೂ ತೆಗೆದುಕೊಳ್ಳಲೇಬೇಕಾಗುತ್ತದೆ. ಆಧಾರವಿಲ್ಲದೆ ಕಾರ್ಯವನ್ನು ಮಾಡಲು ಸಾಧ್ಯವಾಗುವುದಿಲ್ಲ. ಬ್ರಹ್ಮಾಬಾಬಾರ ಜೊತೆಯನ್ನು ತೆಗೆದುಕೊಂಡೆನಲ್ಲವೇ. ಆಗತಾನೇ ನೀವು ಬ್ರಾಹ್ಮಣರಾಗಿರಿ. ಬ್ರಹ್ಮಾಕುಮಾರಿ ಎಂದು ಹೇಳಿಕೊಳ್ಳುತ್ತೀರಿ. ಶಿವಕುಮಾರಿ ಎಂದು ಹೇಳುವುದಿಲ್ಲ. ಏಕೆಂದರೆ ನಿರಾಕಾರ ತಂದೆಯೂ ಕೂಡ ಸಾಕಾರ ಬ್ರಹ್ಮಾರವರ ಆಧಾರ ತೆಗೆದುಕೊಳ್ಳಲೇಬೇಕಾಗುತ್ತದೆ. ಹೇಗೆ ಸಾಕಾರ ಬ್ರಹ್ಮಾರವರ ಆಧಾರ ತೆಗೆದುಕೊಂಡೆನೋ ಹಾಗೆಯೇ ಈಗಲೂ ಸಹ ಬ್ರಹ್ಮನ ಅವ್ಯಕ್ತ ಸೂಕ್ಷ್ಮದೇವತೆಯ ರೂಪದ ಆಧಾರವನ್ನು ತೆಗೆದುಕೊಳ್ಳದೇ ನಿಮ್ಮ ಪಾಲನೆಯನ್ನು ಮಾಡಲು ಸಾಧ್ಯವಾಗುತ್ತದೆಯೇ? ಸಾಕಾರದಲ್ಲಿ ತೆಗೆದುಕೊಂಡರು ಅಥವಾ ಆಕಾರದ ರೂಪದಲ್ಲಿ ತೆಗೆದುಕೊಂಡರು ಆದರೆ ಆತ್ಮದ ಆಧಾರ ಜೊತೆಯನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ವಾಸ್ತವವಾಗಿ ಸರ್ವಶಕ್ತಿವಂತ

ಈಶ್ವರನಾಗಿದ್ದೇನೆ (ಆಲ್ ಮೈಟೀ ಅಥಾರಿಟಿ). ಮಾಂತ್ರಿಕನು ವಿನಾಶೀ ಆಟವನ್ನು ಒಂದು ಸೆಕೆಂಡಿನಲ್ಲಿ ಮಾಡಿ ತೋರಿಸಬಲ್ಲನು. ಆದ್ದರಿಂದ ಸರ್ವಶಕ್ತಿವಂತ ಈಶ್ವರನು ಏನು ಬೇಕಾದರೆ ಅದನ್ನು ಮಾಡಲು ಸಾಧ್ಯವಿಲ್ಲವೇ? ಮಾಡಲು ಸಾಧ್ಯವಿದೆಯೇ? ಈಗಲೇ ವಿನಾಶವನ್ನು ಮಾಡಲು ಸಾಧ್ಯವಿದೆಯೇ? ಒಂಟಿಯಾಗಿ ಮಾಡಲು ಸಾಧ್ಯವಿದೆಯೇ. ಒಂಟಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ. ಸರ್ವಶಕ್ತಿವಂತ ಈಶ್ವರನಾಗಿದ್ದರೂ ಸಹ ಸಾಥಿಗಳಾದ ನಿಮ್ಮ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದೇನೆ.ಆದ್ದರಿಂದ ನಿಮ್ಮೊಂದಿಗೆ ತಂದೆಯ ಪ್ರೀತಿಯು ಎಷ್ಟೊಂದು ಇದೆ. ಬೇಕಾದರೆ ಮಾಡಬಹುದು. ಆದರೆ ಮಾಡಬಾರದು. ಮಂತ್ರಗಾರಿಕೆಯ ದಂಡವನ್ನು ತಿರುಗಿಸಲು ಸಾಧ್ಯವಿಲ್ಲವೇ? ಆದರೆ ರಾಜ್ಯಾಧಿಕಾರಿ ಯಾರು ಆಗುತ್ತಾರೆ? ತಂದೆಯು ಆಗುವರೇ? ನೀವು ಆಗುವಿರಿ. ಸ್ಥಾಪನೆಯನ್ನೂ ಮಾಡಿಬಿಡಬಹುದು. ವಿನಾಶವನ್ನೂ ಮಾಡಿಬಿಡಬಹುದು ಆದರೆ ರಾಜ್ಯಭಾರವನ್ನು ಯಾರು ಮಾಡುವರು? ನೀವು ಇಲ್ಲದಿದ್ದರೆ ಕಾರ್ಯವು ನಡೆಯುವುದೇ? ಆದ್ದರಿಂದ ತಂದೆಯು ನಿಮ್ಮೆಲ್ಲರನ್ನೂ ಕರ್ಮಾತೀತ ಮಾಡಲೇಬೇಕಾಗಿದೆ. ನೀವು ಕರ್ಮಾತೀತ ಆಗಲೇಬೇಕಲ್ಲವೇ. ಅಥವಾ ತಂದೆಯು ಬಲವಂತವಾಗಿ ಮಾಡಿಸಬೇಕೋ? ತಂದೆಯು ಮಾಡಿಸಬೇಕಾಗಿದೆ ಹಾಗೂ ನೀವೆಲ್ಲರೂ ಆಗಲೇಬೇಕಾಗಿದೆ. ಇದು ವಿಶ್ವನಾಟಕವು ಎನಿಸುತ್ತದೆಯಲ್ಲವೇ? ಅಥವಾ ಒಮ್ಮೊಮ್ಮೆ ಇದೇನು ರಚನೆಯಾಗಿದೆಯೆಂದು ಬೇಸರಗೊಳ್ಳುತ್ತೀರೋ? ಇದು ಬದಲಾವಣೆಯಾಗಬೇಕೆಂದು ಯೋಚಿಸುತ್ತೀರಾ? ಇದು ರಚನೆಯಾಗಿ ರಚಿಸಲ್ಪಟ್ಟಿರುವ ನಾಟಕವಾಗಿದೆ ಎಂದು ತಂದೆಯು ಹೇಳುತ್ತಾರೆ. ಇದು ಬದಲಾವಣೆಯಾಗುವುದು ಸಾಧ್ಯವಿಲ್ಲ. ಈ ವಿಶ್ವನಾಟಕದಲ್ಲಿ ನಿಮ್ಮ ಈ ಅಂತಿಮ ಜನ್ಮಕ್ಕೆ ಶಕ್ತಿಗಳಿವೆ. ನಾಟಕದಲ್ಲಿ ಈ ಶ್ರೇಷ್ಠ ಬ್ರಾಹ್ಮಣ ಜನ್ಮದಲ್ಲಿ ಅನೇಕ ಶಕ್ತಿಗಳು ದೊರೆತಿವೆ. ತಂದೆಯು ಅರ್ಪಣೆ ಮಾಡಿರುವುದರಿಂದ ವಿಲ್‌ಪವರ್ (ಮನೋಬಲ) ಇದೆ. ಹಾಗಾದರೆ ಏನು ನೆನಪಿಟ್ಟುಕೊಳ್ಳುವಿರಿ? ಯಾವ ಶಬ್ದವನ್ನು ನೆನಪಿಟ್ಟುಕೊಳ್ಳುವಿರಿ. ಕರನ್‌ಕರಾವನ್‌ಹಾರ್ ಎಂಬುದನ್ನು ಪಕ್ಕಾ ನೆನಪಿಟ್ಟುಕೊಳ್ಳುವಿರೋ ಅಥವಾ ವಿಮಾನದಲ್ಲಿ ಹೋಗುತ್ತಾ ಹೋಗುತ್ತಾ ಮರೆತು ಬಿಡುತ್ತೀರೋ? ಮರೆಯಬೇಡಿರಿ. ಮಧುರವಾದ ನಾಟಕವಾಗಿದೆ. ಸೊಗಸಾಗಿದೆ

ಈಗ ಪುನಃ ನಿಮ್ಮನ್ನು ಶರೀರದ ಬಂಧನದಿಂದ ದೂರವಾದ ಕರ್ಮಾತೀತ ಸ್ಥಿತಿಯಲ್ಲಿ ಸ್ಥಿತ ಮಾಡಿಕೊಂಡು ಕರ್ಮ ಮಾಡಿಸುತ್ತಾ ಇದ್ದೇನೆ. ಆದರೆ ಅಶರೀರಿಯಾಗಿ ಮಾಲಿಕನಾಗಿ ಹಾಗೂ ತಂದೆಯ ಮೂಲಕ ನಿಮಿತ್ತ ಮಾಡಲ್ಪಟ್ಟಿರುವ ಆತ್ಮನಾಗಿದ್ದೇನೆ ಎನ್ನುವ ಸ್ಮೃತಿಯಲ್ಲಿ ಪುನಃ ಮನಸ್ಸು ಹಾಗೂ ಬುದ್ಧಿಯನ್ನು ಸ್ಥಿತಮಾಡಿರಿ. (ಡ್ರಿಲ್) ಒಳ್ಳೆಯದು.

**ನಾಲ್ಕೂ ಕಡೆಯ ಸದಾ ಸೇವೆಯ ಸಂಲಗ್ನತೆ, ಉತ್ಸಾಹದಲ್ಲಿ ಇರುವ ಸೇವಾಧಾರಿ ಆತ್ಮರು, ಸದಾ ಸ್ವಪುರುಷಾರ್ಥ ಹಾಗೂ ಸೇವೆ ಎರಡರ ಬ್ಯಾಲೆನ್ಸ್ ಇಟ್ಟುಕೊಳ್ಳುವ ಆನಂದಪೂರ್ಣ ಆತ್ಮರು, ಸದಾ ನಿಸ್ವಾರ್ಥ ದಯಾಹೃದಯರಾಗಿ ಸರ್ವ ಆತ್ಮರ ಪ್ರತಿ ಸತ್ಯವಾದ ದಯೆಯನ್ನು ತೋರುವ ವಿಶೇಷ ಆತ್ಮರಿಗೆ, ಸದಾ ಒಂದು ಸೆಕೆಂಡಿನಲ್ಲಿ ತಮ್ಮನ್ನು ಕರ್ಮಬಂಧನ ಅಥವಾ ಆನೇಕ ರಾಯಲ್ ಬಂಧನಗಳಿಂದ ಮುಕ್ತರನ್ನಾಗಿ ಮಾಡಿಕೊಳ್ಳುವ ತೀವ್ರಪುರುಷಾರ್ಥಿ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಈ ದಿನ ವಿಶೇಷವಾಗಿ ಮುಖ್ಯವಾಗಿ ಮಧುವನ ನಿವಾಸಿಗಳು ಹಾಗೂ ಮಧುಬನದ ಭುಜಗಳು-ಎಷ್ಟು ಭುಜಗಳಿವೆ. 4 ಇವೆಯೋ, 5 ಇದೆಯೋ? ಜ್ಞಾನ ಸರೋವರದವರಾಗಿರಲಿ. ಆಸ್ಪತ್ರೆಯವರಾಗಿರಲಿ.

ಮ್ಯೂಜಿಯಂನವರಾಗಿರಲಿ, ತಲಹಟಿಯವರಾಗಿರಲಿ ಅಥವಾ ಸಂಗಮ ಭವನದವರಾಗಿರಲಿ ಹಾಗೂ ಪ್ರವೃತ್ತಿಯಲ್ಲಿದ್ದುಕೊಂಡು ನಿವೃತ್ತಿಯ ಪಾತ್ರವನ್ನು ಅಭಿನಯಿಸುವವರಾಗಿರಲಿ, ಯಾರು ಯಾರು ಇದ್ದಾರೋ ಎಲ್ಲರೂ ಎಡಬಿಡದೆ ಬಹಳ ಸಮಯದಿಂದ ತುಂಬಾ ಚೆನ್ನಾಗಿ ಸೇವೆ ಮಾಡಿದ್ದೀರಿ. ಎಲ್ಲರಿಗೂ ಖುಷಿಯನ್ನು ಕೊಟ್ಟಿದ್ದೀರಿ ಹಾಗೂ ಆಶೀರ್ವಾದವನ್ನು ತೆಗೆದುಕೊಂಡಿದ್ದೀರಿ. ಬಾಪ್‌ದಾದಾರವರು ಇಂತಹ ಸೇವಾಧಾರಿಗಳಿಗೆ ಶುಭಾಶಯಗಳನ್ನೂ ಕೊಡುತ್ತೇವೆ. ನೀವು ಡಬಲ್ ವಿದೇಶೀಯರ ಸೇವೆಯನ್ನು ಅಥವಾ ಬರುವ ಅತಿಥಿಗಳ ಸೇವೆಯನ್ನು ಚೆನ್ನಾಗಿ ಮಾಡಿದ್ದೀರಲ್ಲವೇ.

ಮಧುಬನದವರು ಇಲ್ಲಿ ಎಷ್ಟು ಮಂದಿ ಕುಳಿತುಕೊಂಡಿದ್ದೀರಿ. ಎದ್ದು ನಿಂತುಕೊಳ್ಳಿರಿ. ತುಂಬಾ ಚೆನ್ನಾಗಿದೆ. ಮ್ಯೂಜಿಯಂನವರು ಇದ್ದಾರೆಯೇ? ಇದ್ದಾರೆಯೇ? ಸಂಗಮದವರು, ಜ್ಞಾನಸರೋವರದ ಸೇವಾಧಾರಿಗಳು ಇದ್ದಾರೆಯೇ? ನೋಡಿರಿ. ಅಲ್ಲಿ ನಿಮ್ಮ ದೊಡ್ಡ ಪ್ರೋಗ್ರಾಂಗಳು (ಕಾರ್ಯಕ್ರಮಗಳು) ಆಗಾಗ್ಗೆ ಆಗುತ್ತವೆ. ಆದರೆ ಮಧುಬನದಲ್ಲಿ ಸದಾ ದೊಡ್ಡ ಪ್ರೋಗ್ರಾಂ ಇದೆ. ಸಣ್ಣ ಪ್ರೋಗ್ರಾಂ ನಡೆಯುವುದಿಲ್ಲ. ದೊಡ್ಡದೇ ನಡೆಯುತ್ತದೆ. ಆದ್ದರಿಂದ ಮಧುಬನ ಅರ್ಥಾತ್ 5 ಭುಜಗಳೂ ಒಟ್ಟಿಗೆ ಇವೆ. ಆಸ್ಪತ್ರೆ ಇಲ್ಲದಿದ್ದರೂ ಕೆಲಸ ನಡೆಯುವುದಿಲ್ಲ. ಜ್ಞಾನಸರೋವರದ ಸೇವಾಧಾರಿಗಳು ಇಲ್ಲದಿದ್ದರೂ ಕೆಲಸ ನಡೆಯುವುದಿಲ್ಲ. ಪಾಂಡವ ಭವನದ ಸೇವಾಧಾರಿಗಳು ಎಲ್ಲರೂ ತುಂಬಾ ಅವಶ್ಯಕವಾಗಿದ್ದಾರೆ. ಹಾಗೂ ಈಗಂತೂ ಎಲ್ಲರ ಮನಸ್ಸಿನಲ್ಲಿಯೂ ಏನಿದೆ. ಈಗ ಏನು ತಯಾರಿ ಮಾಡಬೇಕಾಗಿದೆ? ಶಾಂತಿವನದಲ್ಲಿ ಮೇಳವು ಆಗಲಿದೆ. ಹೆಸರು ಶಾಂತಿವನ ಆಗಿದ್ದರೂ ಅಲ್ಲಿ ಮೇಳವು ಆಗಲಿದೆ. ರಗಳೆ, ಜಗಳವಲ್ಲ. ಪ್ರಪಂಚದ ಮೇಳಗಳು ರಗಳೆ, ಗೊಂದಲದಲ್ಲಿ ಪರ್ಯವಸಾನವಾಗುತ್ತದೆ. ಆದ್ದರಿಂದ ಎಲ್ಲರಿಗೂ ಶಾಂತಿಭವನವನ್ನು ತಯಾರು ಮಾಡುವ ಬಗ್ಗೆ ತುಂಬಾ ಅಕ್ಕರೆ ಇದೆಯೇ? ಕಷ್ಟವಿದೆಯೋ? ಡೈಮಂಡ್ ಜೂಬ್ಲಿಯನ್ನು ಆಚರಿಸಬೇಕಾಗಿದೆಯೇ? ಪ್ರಾರಂಭ ಮಾಡೋಣವೇ? (ಆಗಲಿ ಬಾಬಾ) ಡಬಲ್ ಕಾರ್ಯ ಮಾಡಬೇಕಾಗುತ್ತದೆ. ಒಂದು ಡೈಮಂಡ್ ಜೂಬ್ಲಿ ಹಾಗೂ ಇನ್ನೊಂದು ಶಾಂತಿವನದ ತಯಾರಿ. ಸರೋವರ ಆಗಿಬಿಡುವುದು. ನೋಡಿರಿ ಲೀಲೆಯು ಏನಾಗಿದೆ? ಒಂದು ಬಿಂದು ಹಾಗೂ ಇನ್ನೊಂದು ಹನಿ, ತಂದೆಯ ಸ್ಮರಣಾರ್ಥವಾದ ಮಂದಿರ ವಿನಿದೆಯೋ ಅದರಲ್ಲಿಯೂ ಏನು ತೋರಿಸುತ್ತಾರೆ? ಹನಿ ಹನಿಯಾಗಿ ಅಭಿಷೇಕ ಪಾತ್ರೆಯಿಂದ ನೀರು ತೊಟ್ಟಿಕ್ಕುವುದನ್ನೂ ತೋರಿಸುತ್ತಾರೆ ಹಾಗೂ ಬಿಂದುವನ್ನೂ ತೋರಿಸುತ್ತಾರೆ. ಹೀಗೆ ನಿಮ್ಮೆಲ್ಲರ ಶುಭ ಭಾವನೆ ಹಾಗೂ ಸಹಯೋಗದ ಹನಿಯು ಈ ಮೇಳಾ ಭವನವನ್ನು ತಯಾರು ಮಾಡಿಬಿಡುವುದು. ಆದ್ದರಿಂದ ಎಲ್ಲರೂ ಸಹಯೋಗಿಯಾಗಿದ್ದೀರಲ್ಲವೇ? ಅಥವಾ ಡೈಮಂಡ್ ಜೂಬ್ಲಿಯ ನಂತರ ಮಾಡೋಣವೋ? 6 ತಿಂಗಳು ನಿಂತುಬಿಡಬೇಕೇ? ಪ್ರಾರಂಭ ಮಾಡಿ ಬಿಡೋಣವೇ (ಆಗಲಿ ಬಾಬಾ) ಭಾರತದವರೂ ಕೇಳುತ್ತಾ ಇದ್ದಾರೆ. ಕೇವಲ ನೀವು ಡಬಲ್ ವಿದೇಶೀಯರು ಮಾತ್ರವಲ್ಲ. ಎಲ್ಲರ ಸಹಯೋಗದ ಹನಿಯಿಂದ ಮಹಲು ತಯಾರಾಗಿ ಬಿಡುವುದು ಹಾಗೂ ನೀವು ಮೇಳವನ್ನು ಮಾಡುವಿರಿ. ಇಲ್ಲಿ ಮಿಲನದ ಮೇಳವು ಆಗುತ್ತದೆ. ಆದ್ದರಿಂದ ಹನಿ-ಹನಿಯಿಂದ ಡಬಲ್ ವಿದೇಶೀಯರೂ ಸಹ ಈ ವರ್ಷ ಸೇವೆಯಲ್ಲಿ ಚೆನ್ನಾಗಿ ಹೈಜಂಪ್ ಮಾಡಿದ್ದಾರೆ. ಪ್ರೋಗ್ರಾಮ್ಗಳನ್ನು ಮಾಡಿದ್ದಾರೆ. ಮಾಡುತ್ತಾ ಇದ್ದಾರೆ. ಎಷ್ಟೊಂದು? ಒಂದಾದ ಮೇಲೊಂದು ಪ್ರೋಗ್ರಾಮ್ ಹಾಗೂ ಎಲ್ಲವೂ ಸಫಲ ಆಗಿವೆ ಹಾಗೂ ಸದಾ ಸಫಲವಾಗುತ್ತಿರುವವು. ಯಾರು ಮೊದಲನೆಯ

ಪ್ರೋಗ್ರಾಮ್ ಸ್ಕ್ರೀಟ್‌ನದನ್ನು ಮಾಡಿದಿರೋ ಅವರು ಎದ್ದು ನಿಂತುಕೊಳ್ಳಿರಿ. ಸಹಯೋಗಿಯಾಗಿದ್ದರೋ ಜವಾಬ್ದಾರರಾಗಿದ್ದಾರೋ ಕೇವಲ ಮೂವರು ಶಕ್ತಿಯರು ಉಳಿದುಕೊಂಡಿದ್ದಾರೆ. ಹೊರಟುಹೋಗಿದ್ದಾರೆ. ಯಾರು ಅವರು ಎದ್ದೇಳಿ. ಉಳಿದವರು ಹೊರಟು ಹೋಗಿರುವವರಿಗೆ ಪದಮದಷ್ಟು ಅಭಿನಂದನೆಗಳು ಶುಭಾಶಯಗಳನ್ನು ಕೊಡಿರಿ. ಒಳ್ಳೆಯದು - ಇನ್ನೊಂದು ಪ್ರೋಗ್ರಾಂ ಸಹಯೋಗಿಯಾದವರು ಎದ್ದೇಳಿ. ಮಹಿಳೆಯರದು ಆಯಿತೋ ಅದರಲ್ಲಿ ಇದರಲ್ಲಿಯೂ ಪಾಂಡವರಿದ್ದಾರೆ. ಪಾಂಡವರು ಬ್ಯಾಕ್ ಬೋನ್ ಆಗಿದ್ದಾರೆ. ಶಕ್ತಿಯರು ಮುಂದೆ ಇರುತ್ತಾ ಬಂದಿದ್ದಾರೆ. ಇನ್ನೂ ಒಂದು ಪ್ರೋಗ್ರಾಂ ಆಗುವುದು ಉಳಿದಿದೆ. ಒಳ್ಳೆಯದು. ಮಕ್ಕಳ ಕಾರ್ಯಕ್ರಮದ ಸಲುವಾಗಿ ಯಾರು ಜವಾಬ್ದಾರಿ ವಹಿಸಿದ್ದರು? (ಹೊರಟು ಹೋದರು) ಅವರಿಗೆ ಡಬಲ್ ಪದಮ ಶುಭಾಶಯಗಳು. ಈಗ ಏನು ಆಗಲಿದೆಯೋ ಆ ಕಾರ್ಯಕ್ರಮಕ್ಕೆ ನಿಮಿತ್ತರು ಯಾರಾಗಿದ್ದಾರೆ. ಇದರಲ್ಲಿ ಪಾಂಡವರಿದ್ದಾರೆ ಇದೂ ಆಗಲಿರುವುದರಿಂದ ಮುಂಚಿತವಾಗಿಯೇ (ಇನ್ ಅಡ್ವಾನ್ಸ್) ಶುಭಾಶಯಗಳು. ಮಾಡಲು ನಿಮಿತ್ತರಾದರು. ಅವರಿಗೂ ಇವರು ಸೇವೆ ಆದರೆ ಒಂದುವೇಳೆ ನೋಡುವವರು ಕುಳಿತಿರುವರರು ಇಲ್ಲದಿದ್ದರೆ ಹಾಲ್ (ಸಭಾಂಗಣವು) ಖಾಲಿಯಾಗಿ ಇರುತ್ತದೆ. ಆದ್ದರಿಂದ ನೋಡುವವರು. ಕುಳಿತಿರುವವರು ನಿಮಗೂ ಸಹ ಶುಭಾಶಯಗಳು. ಡಬಲ್ ವಿದೇಶೀಯರು ಈಸಲ ಡಬಲ್ ಸಂಖ್ಯೆಯನ್ನೂ ತಯಾರು ಮಾಡಿದ್ದಾರೆ. ತುಂಬಾ ವೃದ್ಧಿಯಾಗಿಬಿಟ್ಟಿದೆಯಲ್ಲವೇ, (ಜ್ಞಾನಸರೋವರವು ಸಣ್ಣದಾಗಿ ಬಿಟ್ಟಿದೆ) ಅದನ್ನು ಎಷ್ಟು ದೊಡ್ಡದಾಗಿ ಕಟ್ಟಿದರೂ ಸಹ ಸಣ್ಣದಾಗಿಯೇ ಆಗಲಿದೆ.

ವಿದೇಶದಿಂದ ಎಲ್ಲಕ್ಕಿಂತಲೂ ದೊಡ್ಡ ತಂಡವು ಯಾರದಾಗಿದೆ? ರಷ್ಯಾ ... ಸಣ್ಣವರು ಭಗವಂತನ ಸಮಾನ ಆಗಿದ್ದಾರೆ (ಛೋಟಾ ಸುಭಾನ್ ಅಲ್ಲಾ). ರಷ್ಯಾದವರು ಎದ್ದೇಳಿ, ತುಂಬಾ ಒಳ್ಳೆಯದು. ಪರಿಸ್ಥಿತಿಗಳಿಂದ ಪಾರಾಗುವ ವಿಧಿಯನ್ನು ಅರಿತುಕೊಂಡುಬಿಟ್ಟಿದ್ದಾರೆ. ಎಷ್ಟೇ ಪರಿಸ್ಥಿತಿಗಳು ಇದ್ದರೂ ಸಹ ಪಾರಾಗುವುದು ಸಹಜವಾಗಿ ಬಿಟ್ಟಿದೆ. ಆದ್ದರಿಂದ ರಷ್ಯಾದವರಿಗೆ ಬುದ್ಧಿಯುಳ್ಳವರಾದ ಸಲುವಾಗಿ ಅಭಿನಂದನೆಗಳು ಒಳ್ಳೆಯದು. ಎಲ್ಲರಿಗೂ ನೆನಪು ದೊರೆಯಿತು. ಮೊದಲು ಅಕ್ಕರೆ ಉತ್ಸಾಹವನ್ನು ದ್ವಿಗುಣಗೊಳಿಸುವವರು ನೀವೆಲ್ಲರೂ ಆಗಿದ್ದೀರಿ. ನೀವು ಇಲ್ಲದಿದ್ದರೆ ಯಾವ ಪ್ರೋಗ್ರಾಮ (ಕಾರ್ಯಕ್ರಮವೂ) ಸಫಲವಾಗುವುದಿಲ್ಲ. ಯಾರ ಮುಂದೆ ಭಾಷಣ ಮಾಡುತ್ತಾರೆ. ಗೋಡೆಗಳಿಗೆ ಮಾಡುತ್ತಾರೆಯೇ. ಆದ್ದರಿಂದ ಎಲ್ಲರಿಗಿಂತಲೂ ಮೊದಲು ನಿಮಗೆ ಶುಭಾಶಯಗಳು, ಈಗ ವಿಧಿಯನ್ನು ಕಲಿತುಕೊಂಡು ಬಿಟ್ಟಿದ್ದಾರೆ. ಒಳ್ಳೆಯದು - ಈಗ ಏನು ಮಾಡಬೇಕಾಗಿದೆ? ಪರಿಶ್ರಮಿಸಿದ್ದಾರೆ. ದಕ್ಷಿಣ ಆಫ್ರಿಕಾದ ನಿಮಿತ್ತ ಶಿಕ್ಷಕಿಯರು ಯಾರಿದ್ದೀರೋ ಅವರು ಎದ್ದೇಳಿ. ಸ್ವಲ್ಪ ಸಮಯದಲ್ಲಿ ಚೆನ್ನಾಗಿ ಶ್ರಮಪಟ್ಟಿದ್ದೀರಿ. ಧೈರ್ಯವುಳ್ಳವರಾಗಿದ್ದೀರಿ ಹಾಗೂ ಮಾರೀಷಿಯಸ್‌ನವರು ಎದ್ದೇಳಿ. ಮಾರೀಷಿಯಸ್‌ನವರೂ ಸಹ ಉತ್ತಮರಾಗಿದ್ದಾರೆ. ಸಣ್ಣ ದೇಶದವರಾಗಿದ್ದರೂ ದೊಡ್ಡ ಕಾರ್ಯವನ್ನು ಮಾಡಿದ್ದಾರೆ ಚೆನ್ನಾಗಿ ಮಾಡಿದ್ದಾರೆ ಹಾಗೆಯೇ ಇನ್ನೂ ಮುನ್ನಡೆಯುತ್ತಾ ಹೋಗಿರಿ ಹಾಗೂ ಎಲ್ಲಕ್ಕಿಂತಲೂ ದೊಡ್ಡ ಮೈಕ್ ತಯಾರುಮಾಡಿ ಕರೆತರುತ್ತಾ  ದಕ್ಷಿಣ ಆಫ್ರಿಕಾ ಮತ್ತು ಮಾರೀಷಿಯಸ್ನವರಿಬ್ಬರೂ ಚೆನ್ನಾಗಿ ಯಾರು ಮೊದಲನೆಯ ಸಲ ಬಂದಿದ್ದಾರೋ ಅವರು ಎಷ್ಟು ಮಂದಿ ಇದ್ದಾರೆ. ಕೈ ಎತ್ತಿರಿ (ಟೋಲಿಯ ಸಮಯದಲ್ಲಿ ಸಾಲಾಗಿ ಬನ್ನಿರಿ) ಹಳಬರು ತಮಗೆ ಟೋಲಿ ಸಿಗಲೇ ಇಲ್ಲವೆಂದು ಹೇಳುವರು. ಆದರೆ ದೊಡ್ಡವರ ಕರ್ತವ್ಯವು ಏನಾಗಿರುತ್ತದೆ? ಸಣ್ಣವರನ್ನು ಮುಂದೆ ಇಡುವುದು. ಇದರಲ್ಲಿಯೇ

ಹಿರಿಮೆಯಿದೆ. ಆದ್ದರಿಂದ ಸಣ್ಣವರನ್ನೂ ನೋಡಿ ಚೆನ್ನಾಗಿ ಖುಷಿಯಾಗಿರಿ. ನಿಮ್ಮ ಬಗ್ಗೆ ಯೋಚಿಸಬೇಡಿರಿ. ಸಣ್ಣವರನ್ನು ಮುನ್ನಡೆಸಿರಿ. ಸಣ್ಣವರಿಗೆ ಎಕ್ಸ್ಟ್ರಾ (ಹೆಚ್ಚಿಗೆ) ದೊರೆಯುವುದು. ಒಳ್ಳೆಯದು. ನಿಮಗೆ ದೊರೆತುಬಿಟ್ಟಂತಾಗಿದೆ.

**ದಾದಿಯರು ಹಾಗೂ ಜಾನಕಿ ದಾದಿಯವರೊಂದಿಗೆ :** ಸರ್ವರ ಸಹಯೋಗವು ಸಹಜವಾಗಿಯೇ ನಿಮ್ಮನ್ನು ಹಾಗೂ ಸೇವೆಯನ್ನು ವೃದ್ಧಿ ಮಾಡುತ್ತಾ ಇದೆ. ಹಾಗೂ ನೀವು ನೋಡಿ ನೋಡಿ ಹರ್ಷಿತರಾಗುತ್ತಾ ಇದ್ದೀರಿ. ನಿಮ್ಮ ಕಾರ್ಯವು ನೋಡಿ ನೋಡಿ ಹರ್ಷಿತರಾಗುವುದಾಗಿದೆ. ಈಗ ಈ ಕಾರ್ಯವೇ ಉಳಿದುಬಿಟ್ಟಿದೆ. ಅಕ್ಕರೆ ಉತ್ಸಾಹವನ್ನು ಹೆಚ್ಚಿಸಿರಿ ಹಾಗೂ ಹರ್ಷಿತರಾಗಿರಿ. ಮನೋರಂಜನೆ ಆಗಿದೆ ಎನಿಸುತ್ತದೆಯಲ್ಲವೇ. ಶ್ರಮವು ಹಿಡಿಯುತ್ತದೆಯೋ ಅಥವಾ ಮನೋರಂಜನೆಯಾಗಿದೆ ಎನಿಸುತ್ತದೆಯೋ? ಸೇವೆಯೂ ಸಹ ಒಂದು ಆಟವಾಗಿದೆ. ಆಟದಲ್ಲಿ ಯಾರಾದರೂ ಬೀಳುತ್ತಾರೆ. ಯಾರಾದರೂ ಗೆಲ್ಲುತ್ತಾರೆ. ಆದರೆ ಆಟದಲ್ಲಿ ಸದಾ ಖುಷಿಯಾಗುತ್ತದೆ. ಹಾಗೆನಿಸುತ್ತದೆಯೇನು? ಹಾಗೂ ಆಟವನ್ನು ನೋಡಿ ನೋಡಿ ಖುಷಿಯಾಗುತ್ತಾ ಇರುತ್ತೀರಿ. ಹಾಗೂ ಅನ್ಯರಿಗೂ ಖುಷಿಯನ್ನು ದ್ವಿಗುಣಗೊಳಿಸುತ್ತಾ ಇರುತ್ತೀರಿ. ಸೇವೆಯೂ ಸಹ ಏನಾಗಿದೆ? ಸಂಗಮಯುಗದ ಆಟವಾಗಿದೆ. ಅಷ್ಟೇ ಈಗ ನಿಮ್ಮ ಕಾರ್ಯವು ಇದೇ ಆಗಿದೆ. ಖುಷಿಯನ್ನು ಅಧಿಕಗೊಳಿಸುವುದು. ಅಕ್ಕರೆ ಉತ್ಸಾಹವನ್ನು ಅಧಿಕಗೊಳಿಸುವುದು ಹಾಗೂ ಸ್ವಪುರುಷಾರ್ಥವನ್ನು ಹೆಚ್ಚು ಮಾಡುವುದು. ನೀವು ಈಗ ಇದೇ ಆಟವನ್ನು ಆಡಿರಿ ಹಾಗೂ ಅನ್ಯರನ್ನೂ ಆಟದಲ್ಲಿ ಉತ್ತಮ ಆಟಗಾರನನ್ನಾಗಿ ತಯಾರು ಮಾಡಿರಿ, ಒಳ್ಳೆಯದು -

**ದಾದಿ ನಿರ್ಮಲಶಾಂತಾರೊಂದಿಗೆ:** ಇವರೂ ಬಂದುಬಿಟ್ಟಿದ್ದಾರೆ. ಸರಿಯಾಗಿದೆ. ಅನುಭವವಾಗುತ್ತದೆಯಲ್ಲವೇ? ಸೇವೆಯಲ್ಲಿಯೂ ಮೋಜು, ಮನೆಯಲ್ಲಿಯೂ ಮೋಜು, ಹೀಗೆ ಮೋಜೇ ಮೋಜು ಇದೆ. ಒಂದುವೇಳೆ ವಿಶ್ವದಲ್ಲಿ ನೋಡಿದರೆ ಎಲ್ಲರಿಗಿಂತಲೂ ಮೋಜಿನ ಜೀವನವು ಯಾರದಾಗಿದೆ? ಪ್ರಪಂಚದ ಜನರು ತಾವು ಮೋಜಿನಲ್ಲಿದ್ದೇವೆಂದು ಎಷ್ಟೇ ತಿಳಿದುಕೊಂಡಿದ್ದರೂ, ಸದಾ ಕಾಲದ ಮೋಜು, ಸತ್ಯವಾದ ಮೋಜು ನಿಮ್ಮ ಹೊರತು ಅನ್ಯ ಯಾರ ಬಳಿಯೂ ಇಲ್ಲ. ಆದ್ದರಿಂದ ಸದಾ ಮುನ್ನಡೆಯುತ್ತಾ ಇದ್ದೀರಿ ಹಾಗೂ ಅನ್ಯರನ್ನೂ ಮುನ್ನಡೆಸುತ್ತಾ ಇರುತ್ತೀರಿ. ಪ್ರತಿದಿನವೂ ಖುಷಿಯ ಆಹಾರವನ್ನು ಸೇವಿಸುತ್ತಾ ಇರಿ.

**ಮ್ಯೂಜಿಯಂ ಬಗ್ಗೆ ಸಂದೇಶ** : ಈ ಜ್ಞಾನಸರೋವರದ ಮ್ಯೂಜಿಯಂ ತುಂಬಾ ಸೇವೆಗೆ ನಿಮಿತ್ತವಾಗುವುದು. ದೇಶವಿದೇಶದ ಆತ್ಮರು ಇದರಿಂದ ತಂದೆಯ ಪರಿಚಯವನ್ನು ಪ್ರಾಪ್ತಿ ಮಾಡಿಕೊಳ್ಳುವರು ಹಾಗೂ ಅನೇಕ ಆತ್ಮರು ತಾವು ಕಳೆದುಕೊಂಡಿರುವ ಜನ್ಮಸಿದ್ಧ ಅಧಿಕಾರವನ್ನು ಪ್ರಾಪ್ತಿಮಾಡಿಕೊಂಡು ಖುಷಿಯಲ್ಲಿ ನಾಟ್ಯ ಮಾಡುವರು. ಆನೇಕ ಆತ್ಮರಿಗೆ ತಮ್ಮ ಆತ್ಮದ ಹಾಗೂ ತಂದೆಯ ಪರಿಚಯ ದೊರೆಯುವುದರಿಂದ ತಾನು ಏನಾಗಿದ್ದೆನು ಹಾಗೂ ಏನಾಗಿಬಿಟ್ಟೆನು ಎನ್ನುವುದನ್ನು ಅನುಭವ ಮಾಡುವರು. ವಿಚಿತ್ರ ಪರಿವರ್ತನೆಯ ಅನುಭವ ಮಾಡುವರು ಹಾಗೂ ಶಕ್ತಿಶಾಲಿಯಾಗಿ ಅನ್ಯರಿಗೂ ಸಹ ಈ ಈಶ್ವರೀಯ ಸಂದೇಶವನ್ನು ನೀಡುವ ಸಲುವಾಗಿ ನಿಮಿತ್ತರಾಗುವರು.

ರಿವೈಸ್ ಕೋರ್ಸ್ 10-03-1996.

***ಕರನ್‌ಹಾರ್ (ಕರ್ತ) ಹಾಗೂ ಕರಾವನ್‌ಹಾರ್(ಕರ್ತವ್ಯ ಮಾಡಿಸುವರ) ಸ್ಮೃತಿಯಿಂದ ಕರ್ಮಾತೀತ ಸ್ಥಿತಿ.***

ಸೇವೆ ಅಥವಾ ಕರ್ಮ ಹಾಗೂ ಸ್ವಪುರುಷಾರ್ಥ ಅಥವಾ ಯೋಗ ಸ್ಥಿತಿ ಇವೆರಡರ ಬ್ಯಾಲೆನ್ಸ್ ಇಟ್ಟುಕೊಳ್ಳುವ ಸಲುವಾಗಿ ವಿಶೇಷವಾಗಿ ಮಾಡಿಸುವವರು ಮಾಡಿಸುತ್ತಿದ್ದಾರೆ ಹಾಗೂ ನಾನು ಆತ್ಮನು ಕರ್ಮಚಾರಿಯಾಗಿ ಮಾಡುತ್ತಿದ್ದೇನೆ. ಹೀಗೆ ಕರನ್ ಕರಾವನ್ ಹಾರ್ ಎನ್ನುವ ಒಂದು ವಿಷಯವನ್ನು ನೆನಪಿಟ್ಟಾಗ ಬ್ಯಾಲೆನ್ಸ್ ಅನ್ನು ತುಂಬಾ ಸಹಜವಾಗಿ ಮಾಡಬಹುದು. ಸ್ವಪುರುಷಾರ್ಥದ ಗತಿಯು ಕಡಿಮೆಯಾಗಲು ಕಾರಣ ಕರ್ಮಚಾರಿಗೆ ಬದಲಾಗಿ ನಾನೇ ಮಾಡುವವನು ಅಥವಾ ಮಾಡುವವಳಾಗಿದ್ದೇನೆ ಎಂದು ತಿಳಿದುಕೊಳ್ಳುತ್ತಿದ್ದೀರಿ. ಆದರೆ ಕರಾವನ್ ಹಾರ್ ಕರ್ಮ ಮಾಡಿಸುವ ಮಾಲಿಕ ಆತ್ಮ ನಾಗಿದ್ದೇನೆ ಎಂದು ತಿಳಿದುಕೊಳ್ಳಬೇಕು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿ ಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ಸೇವೆ ಮತ್ತು ಸ್ವಪುರುಷಾರ್ಥ ಎರಡರ ಸಮಾನತೆ ಇದೆ.

2. ನಾನು ಕರ್ಮ ಮತ್ತು ಯೋಗ ಎರಡರ ಸಮಾನತೆಯಲ್ಲಿ ಇರುವ ಕರ್ಮ ಯೋಗಿ.

3. ನಾನು ಸೇವೆ ಅಥವಾ ಕರ್ಮ ಮತ್ತು ಸ್ವಪುರುಷಾರ್ಥ ಅಥವಾ ಯೋಗ ಸ್ಥಿತಿ ಎರಡರ ಸಮಾನತೆಯಲ್ಲಿ ಇರಲು ಮಾಡಿ ಮಾಡಿಸುವವರು ತಂದೆ ನಾನು ಮಾಡುವವನು ಎಂಬ ಒಂದು ವಿಷಯವನ್ನು ವಿಶೇಷವಾಗಿ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

4. ನನಗೆ • ತಂದೆಯು ಕರಾವನ್ ಹಾರ್ ಹಾಗೂ •ನಾನು ಆತ್ಮನು ಸಹ ಈ ಕರ್ಮೇಂದ್ರಿಯಗಳ ಮಾಲೀಕನಾಗಿ ಕರ್ಮ ಮಾಡಿಸುತ್ತಿದ್ದೇನೆ. ಎಂಬ ಡಬಲ್ ರೂಪದ ಮಾಡಿಸುವವರ ಸ್ಮೃತಿ ಇದೆ.

5. ನಾನು ಎಂಬ ಮಾಯೆಯ ಭಾವವನ್ನು ಸಮಾಪ್ತಿ ಮಾಡಿ ತಂದೆ ಮಾಡಿಸುವವರು ನಾನು ಆತ್ಮ ಈ ಕರ್ಮೇಂದ್ರಿಯಗಳಿಂದ ಮಾಡಿಸಿ ಕರ್ಮ ಫಲಕ್ಕೆ ಅತೀತವಾಗಿ ಇರುವ ಕರ್ಮಾತೀತ ಸ್ವರೂಪ.

6. ನನ್ನನ್ನು ನಾನು ಸಂಪೂರ್ಣ ಕರ್ಮೇಂದ್ರಿಯಗಳಿಂದ ಅತೀತವಾಗಿ ಭಾವಿಸಿ ಕರ್ಮ ಮಾಡಿಸುವ ಭಾವನೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

7. ನಾನು ಕರ್ಮೇಂದ್ರಿಯಗಳನ್ನು ಅರ್ಥಾತ್ ಮನಸ್ಸು, ಬುದ್ಧಿ, ಸಂಸ್ಕಾರಗಳೊಂದಿಗೆ ಅತೀತವಾಗಿ ಮಾಡಿಸುವ ಆತ್ಮ ಮಾಲಿಕ(ಯಜಮಾನಿ), ವಿಶೇಷ ಆತ್ಮ, ಮಾಸ್ಟರ್ ಸರ್ವ ಶಕ್ತಿವಾನ್ ಆತ್ಮ...ಎಂಬ ಸ್ಮೃತಿಯಿಂದ ಮಾಲಿಕತನ ಅಥವಾ ಮತ್ತು ಮನ್ಮನಾಭವ ಸ್ಥಿತಿಯನ್ನು ಸಹಜವಾಗಿ ಅನುಭವ ಮಾಡಿದ್ದೇನೆ.

8. ನಾನು ತಂದೆಯನ್ನು ಸ್ಮೃತಿ ಮಾಡುವುದರಲ್ಲಿ ಬಾಲಕನಾಗಿ ಕರ್ಮ ಮಾಡಿಸುವಾಗ ಯಜಮಾನಿ(ಮಾಲಿಕನು) ಎಂಬ ಅಭ್ಯಾಸದದಲ್ಲಿ ಇದ್ದೇನೆ.

9. ನಾನು ಮಾಲಿಕ ಮತ್ತು ಕರ್ಮೇಂದ್ರಿಯಗಳು ನನಗೆ ಕರ್ಮಚಾರಿಗಳು, ಸಹಯೋಗಿಗಳು, ಕರ್ಮಕ್ಕೆ ಜೊತೆ ಎಂಬ ಶಕ್ತಿಶಾಲಿ ಅಭ್ಯಾಸವನ್ನು ದಿನವಿಡೀ ಕರ್ಮದ ಸಮಯದಲ್ಲಿ ಮಾಡಿ ಕರ್ಮಾತೀತ ಸ್ಥಿತಿಯನ್ನು ಸಹಜವಾಗಿ ಅನುಭವ ಮಾಡಿಕೊಂಡಿದ್ದೇನೆ.

10. ನಾನು ಸೇವೆ ಹಾಗೂ  ಸ್ವಪುರುಷಾರ್ಥದ ಬ್ಯಾಲೆನ್ಸ್ ನಿಂದ ಸ್ವಯಂ ಮುಂದಕ್ಕೆ ಹೋಗುತ್ತಿದ್ದೇನೆ ಮತ್ತು ಸೇವಾ ಬಂಧನವನ್ನು ಸೇವಾ ಸಂಬಂಧವಾಗಿ ಅನುಭವ ಮಾಡಿಕೊಂಡಿದ್ದೇನೆ.

11. ನಾನೇ ಸೇವೆಯನ್ನು ಮಾಡಬೇಕು, ನಾನೇ ಮಾಡಬಲ್ಲೆನು ಎಂದು ತಿಳಿಯದೇ ಮಾಡಿಸುವವರು ಮಾಡಿಸುತ್ತಿದ್ದಾರೆ, ನಾನು ಕೇವಲ ನಿಮಿತ್ತವಾಗಿ ಮಾಡುತ್ತಿದ್ದೇನೆ ಎಂಬ ಭಾವನೆಯಲ್ಲಿದ್ದೇನೆ.

12. ಯಾರು ಎಷ್ಟು ಕೆಟ್ಟದಾಗಿ ಇದ್ದರೂ ನಾನು ದಯಾ ಭಾವನೆಯಿಂದ ಅವರ ಪ್ರತಿ ತಿರಸ್ಕಾರ, ಅಸಹ್ಯ ಅಥವಾ ಕ್ರೋಧ ಭಾವನೆಯನ್ನು ಸಮಾಪ್ತಿ ಮಾಡಿ ನಿಮಿತ್ತ ಭಾವನೆಯನ್ನು ಸ್ವತಹವಾಗಿ ಅನುಭವ ಮಾಡುವ ದಾತಸ್ವರೂಪ.

13. ನಾನು ಸರ್ವರ ಪ್ರತಿ ನಿಸ್ವಾರ್ಥ ದಯೆ, ಆಕರ್ಷಣಾರಹಿತ ದಯೆಯನ್ನು ತೋರಿಸಿ ಕರ್ಮಾತೀತ ಮತ್ತು ತಂದೆಗೆ ಪ್ರಿಯವಾಗಿ ಇದ್ದೇನೆ.

14. ನಾನು ಶರೀರದ ಬಂಧನಕ್ಕೆ ಅತೀತವಾಗಿ, ಮಾಲಿಕನಾಗಿ ಕರ್ಮ ಮಾಡುತ್ತಿದ್ದೇನೆ, ನೋಡುತ್ತಿದ್ದೇನೆ, ಮಾತನಾಡುತ್ತಿದ್ದೇನೆ, ಮತ್ತು ತಂದೆಯಿಂದ ನಿಮಿತ್ತವಾದ ಆತ್ಮ ಎಂಬ ಸ್ಮೃತಿಯಲ್ಲಿ ಮನಸ್ಸು ಮತ್ತು ಬುದ್ಧಿಯನ್ನು ಸ್ಥಿತ ಮಾಡುವ ಆತ್ಮಿಕ ವ್ಯಾಯಾಮ ಮಾಡುತ್ತಿದ್ದೇನೆ.